ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಕಾರ್ಯಪಾಲಕ ಅಭಿಯಂತರರು ಚಂದ್ರಾ ಬಡಾವಣೆ ಉಪ-ವಿಭಾಗ, ಶಕ್ತಿಸೌಧ, 2ನೇ ಮಹಡಿ
4ನೇ ಬಿ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಎಂ.ಸಿ. ಬಡಾವಣೆ, ಬೆಂಗಳೂರು- 560040.

---

ಸಂಖ್ಯೆ :- ವಾ-131/ವಾ.ಸ/ಸಭಾನಡವಳಿ/ /2022-23 ದಿನಾಂಕ : 17-09-2022

**-: ಸಭೆಯ ನಡವಳಿಗಳು :-**

ದಿನಾಂಕ. 17-09-2022 ರ ಬೆಳಿಗ್ಗೆ 11-00 ಘಂಟೆಗೆ ವಾರ್ಡ್ - 131, ನಾಯಂಡಹಳ್ಳಿ ವಾರ್ಡ್ ಕಛೇರಿಯಲ್ಲಿ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

**********

ಶ್ರೀ ತೀರ್ಥಪ್ರಸಾದ್ .ಎಲ್ ಸಮಿತಿಯ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ವಾರ್ಡ್ - 131 ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರಿದರು. ನಂತರ ಸಾರ್ವಜನಿಕರ ಕುಂದುಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಾಗೂ ಕೋವಿಡ್- 19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು. ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡೆಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಹಾಯಕ ಅಭಿಯಂತರರು ಸಭೆಗೆ ಸ್ವಾಗತ ಕೋರುತ್ತಾ, ಸಭೆಯನ್ನು ಮುನ್ನಡೆಸಲಾಯಿತು.

ಸಭೆಗೆ ಹಾಜರಿದ್ದವರು

| | |
|---|---|
| 1 | ಶ್ರೀ ತೀರ್ಥ ಪ್ರಸಾದ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು<br>ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ -155 |
| 2 | ಶ್ರೀ ಮಂಜೇಗೌಡ ಕಿರಿಯ ಅಭಿಯಂತರರು (ಪ್ರಭಾರ)<br>ಕಾರ್ಯದರ್ಶಿ ಮತ್ತು ಸಂಚಾಲಕರು |
| 3 | ಶ್ರೀ ಸಿದ್ದೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ ಅಭಿನಯ್ ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ ಅರುಣ್‌ಕುಮಾರ್ ಕಂದಾಯ ಪರಿವೀಕ್ಷಕರು |
| 6 | ಶ್ರೀ ಕಿಶೋರ್ ಬಿ.ಎ ಸಹಾಯಕ ಅಭಿಯಂತರರು (ಹೊರಗುತ್ತಿಗೆ ಆಧಾರದ ಮೇಲೆ) |
| 7 | ನವ್ಯಶ್ರೀ |
| 8 | ಮಂಗಳ ಗೌರಿ PHCO (Health) |
| 9 | ನೇತ್ರಾವತಿ |
| 10 | ಶ್ರೀ ಜಿ.ಎಸ್. ಕುಮಾರ್ |
| 11 | ಶ್ರೀ ಮಹೇಶ್ ಕೆ.ಎಸ್ ವಾರ್ಡ್ ಮಾರ್ಷಲ್ |

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು**

1. ಶ್ರೀ ತೀರ್ಥಪ್ರಸಾದ್ ವಾರ್ಡ್ ನೋಡಲ್ ಅಧಿಕಾರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಮಾತನಾಡಿ ವಾರ್ಡ್ 155, ನಾಯಂಡಹಳ್ಳಿ ವಾರ್ಡ್ ಪ್ರದೇಶದಲ್ಲಿ ನಾಗರಿಕರುಗಳಿಗೆ ಯಾವುದೇ ಸಮಸ್ಯೆ ಆಗದಂತೆ ಕೆಲಸ ಮಾಡಲು ವಾರ್ಡ್ ಸಮಿತಿ ಸದಸ್ಯರುಗಳಿಗೆ ಉತ್ಸಾಹ ತುಂಬಿದರು. ಹಾಗೂ ಪ್ರಮಾಣಿಕವಾಗಿ ಕೆಲಸ ಮಾಡಲು ತಿಳಿಸಿದರು.

Scanned by CamScanner

2. ಗಂಗೋಂಡನಹಳ್ಳಿ ಆಶ್ರಮ ರಸ್ತೆಯಲ್ಲಿ ಮಳೆ ಬಂದಾಗ ಮನೆಗಳಿಗೆ ನೀರುನುಗ್ಗುತ್ತಿರುವ ಕಾರಣ ಮಳೆಗಾಲವಿರುವುದರಿಂದ ಕ್ರಮ ಕೈಗೊಳ್ಳಲು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ತಿಳಿಸಿರುತ್ತಾರೆ.
3. ಮೆಟ್ರೋ ಲೇಔಟ್ ರೈಲ್ವೇ ಅಂಡರ್‌ಪಾಸ್ ಹತ್ತಿರ ಇರುವ ಡೆಬ್ರಿಸ್‌ನ್ನು ಸ್ವಚ್ಛಗೊಳಿಸಲು ತಿಳಿಸಿದರು.
4. ವಾರ್ಡ್‌ನ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಹಸಿಕಸ ಮತ್ತು ಒಣಕಸ 91/2 ಟನ್ ಕಸ ಬರುತ್ತದೆ ಎಂದು ಸಭೆಯಲ್ಲಿ ತಿಳಿಸುರುತ್ತಾರೆ.
5. ವಾರ್ಡ್‌ನ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಯಾವುದೇ ಕೋವಿಡ್ ಕೇಸಸ್ ಇರುವುದಿಲ್ಲವೆಂದು ತಿಳಿಸಿರುತ್ತಾರೆ.
6. ನಾಯಂಡಹಳ್ಳಿ ವಾರ್ಡಿನಲ್ಲಿ ವಾರ್ಡ್ ಮಾರ್ಷಲ್ ಆದ ಮಹೇಶ್ ಕೆ.ಎಸ್ ರವರು ಮಾತನಾಡಿ ಸೆಪ್ಟೆಂಬರ್ ತಿಂಗಳಲ್ಲಿ ಕಸ ವಿಲೇವಾರಿ ಮತ್ತು ಪ್ಲಾಸ್ಟಿಕ್ ದಂಡವನ್ನು 14 ಕೇಸ್‌ಗಳಿಗೆ 3600/- ರೂಗಳ ದಂಡವನ್ನು ವಿಧಿಸಲಾಗಿರುತ್ತದೆ.

K. Manjegowda

ಶ್ರೀ ಮಂಜೇಗೌಡ. ಕೆ
ಕಾರ್ಯದರ್ಶಿ

(ಶ್ರೀ ತೀರ್ಥ ಪ್ರಸಾದ್.ಎಲ್)
ವಾರ್ಡ್ ನೋಡಲ್ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner